ಸಂಸ್ಥೆಗಳು, ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಾಮರಾಜನಗರದಲ್ಲಿ ನಗರ ಸಭಾ ಭವನ ನಿರ್ಮಾಣ ಮಾಡಲು ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ಹಾಗೂ ಅನುದಾನವನ್ನು ಎಂದು ಮತ್ತು ಯಾವಾಗ ಬಿಡುಗಡೆ ಮಾಡಲಾಗಿದೆ;

ಆ) ನಗರ ಸಭಾ ಭವನ ಕಾಮಗಾರಿ ಪ್ರಾರಂಭಿಸದೇ ಇರಲು ಕಾರಣಗಳೇನು;

ಇ) ಪ್ರಾರಂಭಿಸದೆ ಇದ್ದಲ್ಲಿ ಎಂದು ಪ್ರಾರಂಭಿಸಲಾಗುವುದು?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವಹಕ್ಕುಗಳು, ಹಾಗೂ ಸಂಸದೀಯ ವ್ಯವಹಾರಗಳು, ಮತ್ತು ಶಾಸನ ರಚನೆ, ಪೌರಾಡಳಿತ, ಮತ್ತು ಸ್ಥಳೀಯ ಸಂಸ್ಥೆಗಳು, ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):

ಅ) ನಗರಸಭೆಗೆ ಬಿಡುಗಡೆಯಾಗಿದ್ದ ಎಸ್.ಎಫ್.ಸಿ. ಅನುದಾನದಲ್ಲಿ ರೂ.60–00 ಲಕ್ಷಗಳನ್ನು 2007–08ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಅನುದಾನದಲ್ಲಿ ಜಿಲ್ಲಾ ಆಡಳಿತ ಭವನ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದ್ದು, ಸದರಿ ಹಣವನ್ನು ಇಂಡಿಯನ್ ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆ.

ಆ) ಉದ್ದೇಶಿತ ನಗರಸಭಾ ಭವನ ನಿವೇಶನವು ರೇಷ್ಮೆ ಇಲಾಖೆಯ ಸ್ವತ್ತಾಗಿದ್ದು, ಸದರಿ ನಿವೇಶನವನ್ನು ಹಸ್ತಾಂತರಗೊಳಿಸುವಲ್ಲಿ ರೇಷ್ಮೆ ಇಲಾಖೆಯ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬೆಂಗಳೂರುರವರೊಡನೆ ಪತ್ರ ವ್ಯವಹಾರ ನಡೆಸಲಾಗಿದ್ದು, ನಿವೇಶನ ಇನ್ನು ಹಸ್ತಾಂತರಗೊಂಡಿರುವುದಿಲ್ಲ. ನಿವೇಶನವು ರೇಷ್ಮೆ ಇಲಾಖೆಯಿಂದ ಹಸ್ತಾಂತರಗೊಂಡ ನಂತರ ಮುಂದಿನ ಕ್ರಮ ವಹಿಸಲಾಗುವುದು.

ಇ) ನಿವೇಶನವು ರೇಷ್ಮೆ ಇಲಾಖೆಯಿಂದ ಹಸ್ತಾಂತರಗೊಂಡ ನಂತರ ನಿಯಾಮಾನುಸಾರ ಕೆ.ಟಿ.ಪಿ.ಪಿ. ಕಾಯ್ದೆ ರೀತ್ಯಾ ಟೆಂಡರ್ ಕರೆದು ಭವನ ನಿರ್ಮಾಣ ಮಾಡಲಾಗುವುದು.

ಹಣದ ವಿವರ ಒದಗಿಸುವುದು

55 (74) ಶ್ರೀ ರುದ್ರೇಶ್ ಗೌಡ ವೈ.ಎಸ್. (ಬೇಲೂರು):– ಮಾನ್ಯ ಪ್ರವಾಸೋದ್ಯಮ, ಮೂಲ ಸೌಲಭ್ಯ ಅಭಿವೃದ್ಧಿ ಹಾಗು ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೇಲೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮದಲ್ಲಿ ಜಾವಗಲ್ ಶ್ರೀನಾಥ್ ಕ್ರೀಡಾಂಗಣ ಇರುವುದು ನಿಜವೇ;

ಆ) ಈ ಕ್ರೀಡಾಂಗಣ ಕಾಮಗಾರಿಯು ಯಾವಾಗ ಪ್ರಾರಂಭವಾಯಿತು; ಇದಕ್ಕೆ ನಿಗದಿಪಡಿಸಿದ ಅನುದಾನವೆಷ್ಟು;

ಇ) ಈ ಕ್ರೀಡಾಂಗಣ ಕಾಮಗಾರಿಗೆ ಖರ್ಚಾದ ಹಣವೆಷ್ಟು;

ಈ) ಕ್ರೀಡಾಂಗಣ ಈಗ ಯಾವ ಹಂತದಲ್ಲಿದೆ;

ಉ) ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳಿಗೆ ಹಾಗೂ ಪ್ರೇಕ್ಷಕರಿಗೆ ಮೂಲಭೂತ ಸೌಲಭ್ಯ ಒದಗಿಸಲಾಗಿದೆಯೇ?

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ, ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು):

ಅ) ಹೌದು.

ಆ) ಕ್ರೀಡಾಂಗಣ ಕಾಮಗಾರಿಯು ದಿನಾಂಕ:20–02–1997ರಂದು ಪ್ರಾರಂಭವಾಯಿತು. ರೂ.14.50 ಲಕ್ಷಗಳ ಅಂದಾಜು ವೆಚ್ಚದಲ್ಲಿ ಪೆವಿಲಿಯನ್ ಬ್ಲಾಕ್ ಮತ್ತು ಜಿಮ್ನಾಷಿಯಂ ಬ್ಲಾಕ್ ನಿರ್ಮಿಸಲಾಗಿದೆ.

ಇ) ರೂ.14.50 ಲಕ್ಷಗಳು.

ಈ) ಪೆವಿಲಿಯನ್ ಬ್ಲಾಕ್ ಮತ್ತು ಜಿಮ್ನಾಷಿಯಂ ಬ್ಲಾಕ್ ಪೂರ್ಣಗೊಂಡಿರುತ್ತದೆ.

ಉ) ಹೌದು.

ಪುರಸಭೆಗೆ ಒದಗಿಸಿರುವ ಹಣದ ವಿವರ

56 (75) ಶ್ರೀ ವೈ.ಎನ್. ರುದ್ರೇಶ್ ಗೌಡ (ಬೇಲೂರು): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವಹಕ್ಕುಗಳು, ಹಾಗೂ ಸಂಸದೀಯ ವ್ಯವಹಾರಗಳು, ಮತ್ತು ಶಾಸನ ರಚನೆ, ಪೌರಾಡಳಿತ, ಮತ್ತು ಸ್ಥಳೀಯ ಸಂಸ್ಥೆಗಳು, ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೇಲೂರು ಪುರಸಭೆಗೆ ಮಾನ್ಯ ಮುಖ್ಯ ಮಂತ್ರಿಗಳ ಸಣ್ಣ ನಗರ ಪಟ್ಟಣಗಳ ಅಭಿವೃದ್ಧಿ ಯೋಜನೆಯಲ್ಲಿ ಹಣ ಒದಗಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಎಷ್ಟು ಹಣ ಒದಗಿಸಲಾಗಿದೆ;

ಇ) ಈ ಕಾಮಗಾರಿಗಳು ಗುಣಮಟ್ಟ ಕಾಯ್ದುಕೊಂಡಿಲ್ಲ ಎಂಬ ಬಗ್ಗೆ ದೂರು ಬಂದಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;